ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 04-05-2017

# ಪತ್ರಿಕಾ ಆಮಂತ್ರಣ

1. ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸಭೆ ಮತ್ತು ಬೆಂಗಳೂರು ನಗರದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ನಿಲಯಗಳಿಗೆ ಅನಿರೀಕ್ಷಿತವಾಗಿ ಭೇಟಿ

   ದಿನಾಂಕ: 05-05-2017 ಶುಕ್ರವಾರ, ಸಮಯ ಮಧ್ಯಾಹ್ನ 3-30 ಗಂಟೆಗೆ ಸಭೆ, ಸಭೆ ನಂತರ ಸ್ಥಳಗಳಿಗೆ ಭೇಟಿ.

   ಸ್ಥಳ : ವಿಧಾನ ಸಭೆಯ ಪೂರ್ವ ಮೊಗಸಾಲೆ, ವಿಧಾನಸೌಧ ಮೊದಲನೇ ಮಹಡಿ, ಬೆಂಗಳೂರು.

2. ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ 102 ನೇ ಸಂಸ್ಥಾಪನಾ ದಿನಾಚರಣೆ:

   ಉದ್ಘಾಟನೆ:

   ಡಾ. ಚಂದ್ರಶೇಖರ ಕಂಬಾರ,
   ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು.

   ಅಧ್ಯಕ್ಷತೆ:
   ಡಾ. ಮನು ಬಳಿಗಾರ್, ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು.

   ದಿನಾಂಕ: 05-05-2017, ಶುಕ್ರವಾರ, ಸಂಜೆ: 5-00 ಗಂಟೆಗೆ
   ಸ್ಥಳ: ಶ್ರೀ ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018.

<u>ಪತ್ರಿಕಾ ಪ್ರಕಟಣೆ</u>

# ಪೊಲೀಸ್ ಠಾಣೆಗಳು ಜನಸ್ನೇಹಿ ಆಗಬೇಕು

– ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಮೇ 4 (ಕರ್ನಾಟಕ ವಾರ್ತೆ)

ಪ್ರತಿ ಪೊಲೀಸ್ ಠಾಣೆಯು ಜನಸ್ನೇಹಿಯಾಗಬೇಕು ಆಗ ಮಾತ್ರ ಪೊಲೀಸರ ಮೇಲೆ ಜನರಿಗೆ ವಿಶ್ವಾಸ ಬರಲು ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿಪ್ರಾಯಪಟ್ಟರು.

ಅವರು ಇಂದು ನಗರದ ವೈಟ್‌ಫೀಲ್ಡ್‌ನಲ್ಲಿ ನೂತನವಾಗಿ ನಿರ್ಮಿಸಿರುವ ವೈಟ್‌ಫೀಲ್ಡ್ ಪೊಲೀಸ್ ಠಾಣೆ ಹಾಗೂ ಉಪ ಆಯುಕ್ತರ ಕಚೇರಿಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ರಾಜ್ಯ ಸರ್ಕಾರವು ಪೊಲೀಸ್ ಇಲಾಖೆಗೆ ಕಳೆದ ನಾಲ್ಕು ವರ್ಷಗಳಲ್ಲಿ ಸಿಬ್ಬಂದಿ ಮತ್ತಿತರ ಮೂಲ ಸೌಕರ್ಯಗಳನ್ನು ಒದಗಿಸಿದೆ. ಅದಕ್ಕೆ ತಕ್ಕಂತೆ ಪೊಲೀಸ್ ಠಾಣೆಗಳಲ್ಲೂ ಸಹ ಗುಣಾತ್ಮಕ ಬದಲಾವಣೆಗಳೂ ಆಗಬೇಕು ಎಂದು ಅವರು ಆಶಿಸಿದರು. ಪೊಲೀಸರು ಇರುವುದರಿಂದಾಗಿಯೇ ಬಹಳಷ್ಟು ಮಂದಿ ಸಜ್ಜನರಾಗಿದ್ದಾರೆ ಎಂದು ಜನರು ಆಡಿಕೊಳ್ಳುವಂತಾಗಬೇಕು ಎಂದು ಬಯಸಿದರು.

ಭೂ ವ್ಯವಹಾರಗಳಿಗೆ ಸಂಬಂಧಿಸಿದ ಅಪರಾಧ ಪ್ರಕರಣಗಳಲ್ಲಿ ಪೊಲೀಸರು ನಿಷ್ಕ್ರಿಯರಾಗಿದ್ದಾರೆಂದು ಆರೋಪ ಕೇಳಿ ಬಂದಿದೆ. ಪೊಲೀಸರು ಎಚ್ಚರಿಕೆವಹಿಸಿ ಕಾನೂನಿನ್ವಯ ಕಾಯಾ ವಾಚಾ ಮನಸಾ ಯಾವುದೇ ರಾಗದ್ವೇಷವಿಲ್ಲದೇ ಕರ್ತವ್ಯ ನಿರ್ವಹಿಸುವಂತೆ ಸೂಚಿಸಿದರು.

ಅಪರಾಧಿಗಳನ್ನು ಪತ್ತೆ ಹಚ್ಚುವುದು ಮಾತ್ರವಲ್ಲ, ಅಪರಾಧ ನಡೆಯದಂತೆ ನೋಡಿಕೊಳ್ಳುವುದೂ ಅಷ್ಟೇ ಮುಖ್ಯ ಎಂದು ನುಡಿದರು. ಜನಸಂಖ್ಯೆ ಹೆಚ್ಚಾದಂತೆ ಅಪರಾಧಗಳು ಹೆಚ್ಚಾಗುತ್ತವೆ. ಜನರ ಸುರಕ್ಷತೆಗಾಗಿ ಪೊಲೀಸರು ತ್ವರಿತವಾಗಿ ಸ್ಪಂದಿಸುವಲ್ಲಿ ತಂತ್ರಜ್ಞಾನದ ಪಾತ್ರ ಬಹುಮುಖ್ಯ ಎಂದು ಅವರು ನುಡಿದರು.

ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವ ಡಿ.ವಿ. ಸದಾನಂದ ಗೌಡ ಅವರು ಮಾತನಾಡಿ ಪೊಲೀಸ್ ಇಲಾಖೆಯಲ್ಲಿ ಆಡಳಿತ ಹಾಗೂ ತನಿಖೆಯಲ್ಲಿ ಪಾರದರ್ಶಕತೆ ಇಂದಿನ ಅಗತ್ಯವಾಗಿದೆ. ಇದಕ್ಕೆ ತಂತ್ರಜ್ಞಾನದ ಅಳವಡಿಕೆ ಪೂರಕವಾಗಿದೆ ಎಂದು ತಿಳಿಸಿದರು.

ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಮಾತನಾಡಿ ರಾಜ್ಯದಲ್ಲಿ 1500 ಪೊಲೀಸ್‌ಠಾಣೆಗಳಿವೆ. ತಂತ್ರಜ್ಞಾನವನ್ನು ಜನರ ಉಪಯೋಗಕ್ಕೆ ಬಳಸಿಕೊಳ್ಳಬೇಕು. ಆಧುನಿಕತೆಯನ್ನು ಪೊಲೀಸ್ ವ್ಯವಸ್ಥೆಯಲ್ಲಿ ಜಾರಿಗೆ ತರಬೇಕು. ಕ್ರೈಮ್ ಕ್ರಿಮಿನಲ್ ಟ್ರಾಕಿಂಗ್ ಸಿಸ್ಟಮ್(ಸಿಸಿಟಿಎಸ್)ಅನ್ನು ಎಲ್ಲ ಪೊಲೀಸ್ ಠಾಣೆಗಳಲ್ಲಿ ಅವಳಡಿಸಲಾಗುವುದು ಎಂದರು.

ಬೆಂಗಳೂರಿಗೆ ವಿಶ್ವದ ಅತ್ಯಂತ ಕ್ರಿಯಾಶೀಲ ನಗರ ಎಂಬ ಹೆಗ್ಗಳಿಕೆಗೆ ಸಿಕ್ಕಿದೆ. ಅದೇ ರೀತಿ ಜನಸಾಮಾನ್ಯರ ಪಾಲಿಗೆ ಇದು ಅತ್ಯಂತ ಸುರಕ್ಷಿತ ನಗರವಾಗಬೇಕು. ಸಂಚಾರದಟ್ಟಣೆ ಹೆಚ್ಚಿದೆ. ದಿಲ್ಲಿ ಹೊರತುಪಡಿಸಿದರೆ ಅತೀ ಹೆಚ್ಚು ವಾಹನಗಳನ್ನು ಹೊಂದಿರುವ ನಗರ ಬೆಂಗಳೂರು. ರಾಜ್ಯ ಸರಕಾರವು ಬೆಂಗಳೂರು ಸರ್ವಾಂಗೀಣ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ 7 ಸಾವಿರ ಕೋಟಿ ರೂ.ಗಳ ಅನುದಾನ ಒದಗಿಸಿದೆ ಎಂದು ಅವರು ಹೇಳಿದರು.

ಮೆಟ್ರೋ 1ನೆ ಹಂತ ಪೂರ್ಣಗೊಂಡಿದ್ದು, ಐದು ಲಕ್ಷ ಜನರಿಗೆ ಉಪಯೋಗವಾಗುತ್ತಿದೆ. ಎರಡನೆ ಹಂತ ಪೂರ್ಣಗೊಂಡ ನಂತರ 50 ಲಕ್ಷ ಜನರಿಗೆ ಅನುಕೂಲವಾಗುತ್ತದೆ.ಆಗ ಸಂಚಾರ ದಟ್ಟಣೆ ಸಮಸ್ಯೆ ಪರಿಹಾರವಾಗಬಹುದು. ಬೆಂಗಳೂರಿನಲ್ಲಿ 100 ಪೊಲೀಸ್ ಠಾಣೆಗಳಿವೆ. 21 ಸಾವಿರ ಪೊಲೀಸ್ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ. 1500 ಜನ ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಕಳೆದ ಮೂರು ವರ್ಷಗಳಲ್ಲಿ ಪೊಲೀಸರಿಗೆ 11 ಸಾವಿರ ಮನೆಗಳನ್ನು ನಿರ್ಮಿಸಲಾಗಿದೆ. ಪೊಲೀಸ್ ಸಹಾಯವಾಣಿ 100 ಅನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, 15 ಸೆಕೆಂಡುಗಳಲ್ಲಿ ಕರೆ ಮಾಡುವವರಿಗೆ ಸ್ಪಂದನೆ ಸಿಗಲಿದೆ. ಇನ್ನು 15 ದಿನಗಳಲ್ಲಿ ಸುಧಾರಿತ ವ್ಯವಸ್ಥೆಯನ್ನು ಲೋಕಾರ್ಪಣೆಗೊಳಿಸಲಾಗುವುದು ಎಂದು ಪರಮೇಶ್ವರ್ ಹೇಳಿದರು. ಮಹದೇವಪುರ ಕ್ಷೇತ್ರದ ಶಾಸಕ ಅರವಿಂದ ಲಿಂಬಾವಳಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬೆಂಗಳೂರು ನಗರ ಪೊಲೀಸ್ ಆಯುಕ್ತ ಪ್ರವೀಣ್ ಸೂದ್ ಅವರು ತಂತ್ರಜ್ಞಾನವು ಹಲವು ಸವಾಲುಗಳಿಗೆ ಉತ್ತರವಾಗಿದೆ. ಟೆಕ್–ಪೊಲೀಸಿಂಗ್‌ನ ಭಾಗವಾಗಿ ಬೆಂಗಳೂರು ನಗರ ಪೊಲೀಸರು ಪರಿಚಯಿಸಿರುವ ಇ–ಲಾಸ್ಟ್ ಮೊಬೈಲ್ ಆಪ್ ತಮ್ಮ ವಸ್ತುಗಳನ್ನು ಕಳೆದುಕೊಂಡ ನಾಗರಿಕರಿಗೆ ದೂರು ದಾಖಲಿಸಲು ಅತ್ಯಂತ ಸಹಕಾರಿಯಾಗಿದೆ.

ಈವರೆಗೆ ಸುಮಾರು 1.5 ಲಕ್ಷ ಜನರು ಈ ಆಪ್‌ನ ಬಳಕೆ ಮಾಡಿಕೊಂಡಿದ್ದು ಅವರು ಪೊಲೀಸ್ ಠಾಣೆಗೆ ಅಲೆಯುವುದು ತಪ್ಪಿದೆ. ಅಂತೆಯೇ ಮಹಿಳೆಯರ ಸುರಕ್ಷತೆಗೆ ಸುರಕ್ಷಾ ಆಪ್ ರೂಪಿಸಲಾಗಿದೆ. ಇಂದು **Find your Polic Station** ಎಂಬ ಹೊಸ ಆಪ್‌ನ್ನು ಪರಿಚಯಿಸಲಾಗುತ್ತಿದೆ.

ನೊಂದವರಿಗೆ ನೆರವು ನೀಡಲು ಪೊಲೀಸ್ ಇಲಾಖೆ ಬದ್ಧವಾಗಿದ್ದು 15 ಸೆಕೆಂಡುಗಳಲ್ಲಿ ನಿಯಂತ್ರಣ ಕೊಠಡಿ ಕರೆ ಸ್ವೀಕರಿಸುವ ಹಾಗೂ 15 ನಿಮಿಷಗಳೊಳಗೆ ಘಟನೆ ನಡೆದ ಸ್ಥಳಕ್ಕೆ ಪೊಲೀಸರು ನೆರವಿಗೆ ಧಾವಿಸುವ ವ್ಯವಸ್ಥೆ ರೂಪಿಸುವ ಗುರಿ ಹೊಂದಲಾಗಿದೆ ಎಂದು ಅವರು ವಿವರಿಸಿದರು.

ಸಮಾರಂಭದಲ್ಲಿ ಬೆಂಗಳೂರು ನಗರಾಭಿವೃದ್ಧಿ ಮತ್ತು ಯೋಜನಾ ಸಚಿವ ಕೆ.ಜೆ. ಜಾರ್ಜ್, ಗೃಹ ಸಚಿವರ ಸಲಹೆಗಾರರ ಕೆಂಪಯ್ಯ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಹಾಗೂ ಮಹಾನಿರೀಕ್ಷಕ ರೂಪಕುಮಾರ್ ದತ್ತ, ಬೆಂಗಳೂರು ಕೇಂದ್ರ ಲೋಕಸಭಾ ಸದಸ್ಯ ಪಿ.ಸಿ. ಮೋಹನ್, ಕೆ.ಆರ್. ಪುರದ ಶಾಸಕ ಬಿ.ಎ. ಬಸವರಾಜ, ವಿಧಾನ ಪರಿಷತ್ ಸದಸ್ಯರಾದ ನಾರಾಯಣಸ್ವಾಮಿ, ರಿಜ್ವಾನ್ ಹರ್ಷದ್, ಬ್ರಿಗೇಡ್ ಸಂಸ್ಥೆಯ ಅಧ್ಯಕ್ಷ ರಿಜ್ವಾನ್ ಹರ್ಷದ್, ಮತ್ತಿತರ ಗಣ್ಯರು ಹಾಜರಿದ್ದರು.

ಎಸ್ಎಂ::ಜಿಪಿಆರ್.

## ವಿಶೇಷ ಅಧಿಕಾರಿಯಾಗಿ ನೇಮಕ

ಬೆಂಗಳೂರು, ಮೇ 4 (ಕರ್ನಾಟಕ ವಾರ್ತೆ)

ಎಂ. ಲಕ್ಷ್ಮೀನಾರಾಯಣ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇವರನ್ನು ಪ್ರಸಕ್ತ ಹುದ್ದೆಯ ಕಾರ್ಯಭಾರದ ಜೊತೆಗೆ ತಕ್ಷಣದಿಂದ ಜಾರಿಗೆ ಬರುವಂತೆ ದಾವಣಗೆರೆಯಲ್ಲಿ ನಡೆಯಲಿರುವ ವಿಶ್ವ ಕನ್ನಡ ಸಮ್ಮೇಳನದ ಅಧಿಕಾರಯುಕ್ತ ವಿಶೇಷ ಅಧಿಕಾರಿಯನ್ನಾಗಿ ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಎಸ್ಎಂ:ಜೆಡಿ:ಜಿಪಿಆರ್.

## ಸಾರಿಗೆ ಅದಾಲತ್

ಬೆಂಗಳೂರು, ಮೇ 4 (ಕರ್ನಾಟಕ ವಾರ್ತೆ)

ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಅಧಿಕಾರಿಗಳ ಕಚೇರಿ, ಬೆಂಗಳೂರು (ಕೇಂದ್ರ) 2 ನೇ ಮಹಡಿ, ಬಿ.ಡಿ.ಎ. ವಾಣಿಜ್ಯ ಸಂಕೀರ್ಣ, ಕೋರಮಂಗಲ, ಬೆಂಗಳೂರು ಇಲ್ಲಿ ಮೇ 8 ರಂದು ಮಧ್ಯಾಹ್ನ 3–00 ಗಂಟೆಗೆ ಸಾರ್ವಜನಿಕರ ಕುಂದು ಕೊರತೆ

ಹಾಗೂ ಸಲಹೆಗಳನ್ನು ಪಡೆಯುವ ಸಲುವಾಗಿ ಸಾರಿಗೆ ಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಸಾರಿಗೆ ಅದಾಲತ್‌ನಲ್ಲಿ ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳು ಹಾಜರಿದ್ದು, ಕುಂದು ಕೊರತೆಗಳನ್ನು ಆಲಿಸಿ ಸೂಕ್ತ ಪರಿಹಾರವನ್ನು ಒದಗಿಸುವ ಕ್ರಮ ಕೈಗೊಳ್ಳುವರು. ಈ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರು ಈ ಸಾರಿಗೆ ಅದಾಲತ್‌ನ ಉಪಯೋಗವನ್ನು ಪಡೆದುಕೊಳ್ಳಬಹುದಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಸ್ವಾತಂತ್ರ್ಯ ಉದ್ಯಾನವನದಲ್ಲಿ ಮೇ 23 ರವರೆಗೆ ಖಾದಿ ಉತ್ಸವ–2017

ಬೆಂಗಳೂರು, ಮೇ 4 (ಕರ್ನಾಟಕ ವಾರ್ತೆ)

ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮತ್ತು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಮೇ 23 ರವರೆಗೆ ರಾಷ್ಟ್ರಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತುಪ್ರದರ್ಶನ ಖಾದಿ ಉತ್ಸವ–2017 ನ್ನು ಗಾಂಧೀನಗರದ ಸ್ವಾತಂತ್ರ್ಯ ಉದ್ಯಾನವನ (ಫ್ರೀಡಂ ಪಾರ್ಕ್) ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಂಡಳಿಯ ಅಧ್ಯಕ್ಷರಾದ ಯಲುವಳ್ಳಿ ಎನ್. ರಮೇಶ್ ಅವರು ಪ್ರಕಟಿಸಿದರು.

ಇಂದು ಪ್ರೀಡಂ ಪಾರ್ಕ್‌ನಲ್ಲಿ ಖಾದಿ ಉತ್ಸವ ಮೇಳದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಈ ಖಾದಿ ಉತ್ಸವಕ್ಕೆ ಹೆಚ್ಚು ಜನ ಆಗಮಿಸಿ ಯಶಸ್ವಿಗೊಳಿಸುವಂತೆ ಅವರು ಕರೆ ನೀಡಿದರು. ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರು ಗ್ರಾಮ ಸ್ವರಾಜ್ಯ ಮತ್ತು ಸ್ವಾವಲಂಬಿ ಗ್ರಾಮ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಗ್ರಾಮೀಣ ಕಸುಬುದಾರರಿಗೆ, ಹಿಂದುಳಿದ, ಕಡುಬಡವರಿಗೆ ಗುಡಿ ಕೈಗಾರಿಕೆಗಳು ಜೀವನವನವನ್ನು ಕಟ್ಟಿಕೊಟ್ಟಿದೆ.

1957 ರಲ್ಲಿ ಸ್ಥಾಪನೆಗೊಂಡ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿಸಿ ಗ್ರಾಮೀಣ ಕಸುಬುದಾರರ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸಿದೆ ಎಂದರು.

ಖಾದಿ ಕೈಯಿಂದಲೇ ನೇಯಲ್ಪಟ್ಟ ವಸ್ತುವಾಗಿದ್ದು ಇದರಲ್ಲಿ ಅರಳೆ ಖಾದಿ, ರೇಷ್ಮೇ ಖಾದಿ ಉಣ್ಣೆ ಖಾದಿ ಹಾಗೂ ಪಾಲಿ ವಸ್ತ್ರಗಳು ಸೇರಿವೆ. ಈ ಉದ್ದಿಮೆಯಡಿ 140 ಖಾದಿ ಸಂಸ್ಥೆಗಳು ಕೆಲಸ ಮಾಡುತ್ತಿದ್ದು ಸುಮಾರು 29,000 ಜನರಿಗೆ ಉದ್ಯೋಗ ಕಲ್ಪಿಸಿದೆ.

ರಾಜ್ಯದಲ್ಲಿ ಸುಮಾರು 8600 ಗ್ರಾಮ ಕೈಗಾರಿಕೆ ಘಟಕಗಳು ಕೆಲಸ ಮಾಡುತ್ತಿದ್ದು, 70,000 ಜನರಿಗೆ ಉದ್ಯೋಗ ಕಲ್ಪಿಸಿದೆ. ಪ್ರತಿ ವರ್ಷ ಜಿಲ್ಲಾ, ರಾಜ್ಯ, ರಾಷ್ಟ್ರಮಟ್ಟದಲ್ಲಿ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗುತ್ತಿದೆ.

ಈ ತಿಂಗಳು ಏರ್ಪಡಿಸಲಾಗಿರುವ ಖಾದಿ ಉತ್ಸವದಲ್ಲಿ ಕರ್ನಾಟಕ ಹಾಗೂ ಇತರ ರಾಜ್ಯಗಳ ಪ್ರದರ್ಶಕರು ಖಾದಿ ಉತ್ಪನ್ನಗಳನ್ನು ಪ್ರದರ್ಶಿಸಿದ್ದಾರೆ. ಈ ಉತ್ಸವದಲ್ಲಿ ಅರಳೆ ಖಾದಿ, ರೇಷ್ಮೆ ಖಾದಿ, ಚಿತ್ರಗಳು, ಬಟ್ಟೆಗಳು, ಮರದ ಕೆತ್ತನೆಯ ವಸ್ತುಗಳು, ಪೀಠೋಪಕರಣಗಳು, ಸೆಣಬಿನ ಉತ್ಪನ್ನಗಳು, ಕರಕುಶಲ ಕೈಚೀಲಗಳು, ವ್ಯಾನಿಟಿ ಬಾಗ್‌ಗಳು, ಕಾಗದದ ವಸ್ತುಗಳು, ನೈಜ ಹಾಗೂ ಶುದ್ಧ ಜೇನು ತುಪ್ಪ, ಗೋಡಂಬಿ, ಔಷಧೀಯ ಉತ್ಪನ್ನಗಳು ಪ್ರಮುಖ ಆಕರ್ಷಣೀಯವಾಗಿವೆ ಎಂದರು.

ಖಾದಿ ಮಂಡಳಿಯ ಸಿ.ಇ.ಒ. ನವೀನ್‌ಕಿರಣ್ ರಾಜು ಅವರು ಮಾತನಾಡಿ ಅರಳೆ ಖಾದಿಗೆ ಶೇ. 35 ರೇಷ್ಮೇ ಖಾದಿಗೆ ಶೇ. 20 ಗುಡಿಕೈಗಾರಿಕೆ ಶೇ. 20 ರಷ್ಟು ರಿಯಾಯಿತಿ ನೀಡಲಾಗುತ್ತಿದೆ.

ಇ–ಮಾರ್ಕೆಟ್ ಮೂಲಕ ಖಾದಿ ಉತ್ಪನ್ನಗಳ ಮಾರಾಟಕ್ಕೆ ಚಿಂತನೆ ನಡೆಸಲಾಗಿದೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ಅವರೊಂದಿಗೆ ಯುವಕ ಯುವತಿರನ್ನು ಗಮನದಲ್ಲಿಟ್ಟುಕೊಂಡು ನವೀನ ಮಾದರಿಯ 40 ಡಿಸೈನ್‌ಗಳನ್ನು ನೀಡಲು ಕೋರಲಾಗಿದೆ ಈ ಬಾರಿ ಹೆಚ್ಚು ಜನರನ್ನು ಖಾದಿ ಉತ್ಸವಕ್ಕೆ ನಿರೀಕ್ಷಿಸಲಾಗುತ್ತಿದೆ ಎಂದು ವಿವರಿಸಿದರು.
ಕವನ/ಕೆವಿ/ಕೆಎಂ

## ಬೀದರ್ ಜಿಲ್ಲೆಯ ಭಾಲ್ಕಿ ಪುರಸಭೆ: ನಾಗರೀಕ ಸ್ನೇಹಿ ಎಲ್.ಇ.ಡಿ. ಉದ್ಘಾಟನೆ

**ಬೆಂಗಳೂರು, ಮೇ 4 (ಕರ್ನಾಟಕ ವಾರ್ತೆ)**

ಬೀದರ್ ಜಿಲ್ಲೆಯ ಭಾಲ್ಕಿ ಪುರಸಭಾ ಕಛೇರಿಯಲ್ಲಿ ಪೌರಾಡಳಿತ ಇಲಾಖಾ ಅಧೀನದಲ್ಲಿ ಬರುವ ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ ನೆರವಿನೊಂದಿಗೆ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಹಾಗೂ ಆಡಳಿತದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಸೇವಾ ವಿಲೇವಾರಿ ದತ್ತಾಂಶವನ್ನು ಎಲ್.ಇ.ಡಿ. ಮುಖಾಂತರ ವೀಕ್ಷಿಸುವ ವ್ಯವಸ್ಥೆಯನ್ನು ಇಂದು ಪೌರಡಳಿತ ಹಾಗೂ ಸಾರ್ವಜನಿಕ

ಉದ್ದಿಮೆಗಳು ಮತ್ತು ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಈಶ್ವರ ಬಿ. ಖಂಡ್ರೆ ಅವರು ಉದ್ಘಾಟಿಸಿದರು.

ಈಗಾಗಲೇ ರಾಜ್ಯದ ಸುಮಾರು 170 ಹೆಚ್ಚು ನಗರಸ್ಥಳೀಯ ಸಂಸ್ಥೆಗಳು ಎಲ್.ಇ.ಡಿ. ಮಾನೀಟರ್‌ನ್ನು ಅಳವಡಿಸಿಕೊಂಡಿದ್ದು, ಇದಕ್ಕೆ ಸಾರ್ವಜನಿಕರು ಉತ್ತಮ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಈ ವ್ಯವಸ್ಥೆಯನ್ನು ಇನ್ನುಳಿದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ 2017 ನೇ ಸಾಲಿನ ಮೇ ಮಾಹೆಯೊಳಗೆ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದೆಂದು ಸಚಿವರು ತಿಳಿಸಿದ್ದಾರೆ.

ಎಲ್.ಇ.ಡಿ. ಮಾನೀಟರ್‌ನಲ್ಲಿ ಜನನ ಮತ್ತು ಮರಣ ದಾಖಲೆಗಳ ನೋಂದಣಿ ಮತ್ತು ಪ್ರಮಾಣ ಪತ್ರಗಳು ವಿತರಣೆ ವ್ಯವಸ್ಥೆ, ಇ–ಆಸ್ತಿ ತಂತ್ರಾಂಶ (ಆಸ್ತಿಗಳ ಮಾಲೀಕತ್ವದ ಹಕ್ಕು ವರ್ಗಾವಣೆ ತಂತ್ರಾಂಶ) ಜನಹಿತ ತಂತ್ರಾಂಶ (ಸಾರ್ವಜನಿಕ ದೂರುಗಳ ನಿರ್ವಹಣೆ) ವ್ಯಾಪಾರ್ (ನಾಗರೀಕರು ಉದ್ದಿಮೆ ಪರವಾನಿಗೆ) ನಿರ್ಮಾಣ (ಕಟ್ಟಡ ಪರವಾನಿಗೆ) ಜಲನಿಧಿ(ನಳಸ ಮತ್ತು ಒಳಚರಂಡಿ ಸಂಪರ್ಕ) ಮಾಹಿತಿ ಲಭ್ಯವಿರುತ್ತದೆ ಎಂದು ಪೌರಾಡಳಿತ ಸಚಿವರ ಪ್ರಕಟಣೆ ತಿಳಿಸಿದೆ.